Construction Work of Hippargi Dam.

679 SRI BHAVU RAO DESHPANDE (Dharwad)—Will the Minister of State for Major and Medium Irrigation be pleased to state.—

(a) whether it has come to the notice of the Government that the work of the Hippargi dam under the Upper Krishna Project has completely come to a standstill recently due to paucity of funds;

(b) the amount that is being spent by the Government towards Pay and Allowance to the staff though the construction work of the dam was stopped;

(c) whether Government intend to complete the Hippargi dam;

(d) if so, the measures to be undertaken by the Government in this regard?

SRI B. B. CHIMMANAKATTI (Minister of State for Major and Medium Irrigation)—

(a) No. The work has not been stopped.

(b) The details of expenditure towards staff are placed on the Table of the House.

(c) Yes.

(d) It has been proposed to take all the necessary required efforts to complete tne work as early as possible.

ಶ್ರೀ ಬಾವೂರಾವ್ ದೇಶಪಾಂಡೆ.— ನಾನು ಹಿಪ್ಪರಗಿ ಅಣೆಕಟ್ಟನ್ನು ಪೂರ್ತಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳಿದ್ದಕ್ಕೆ ಆ ಅಣೆಕಟ್ಟನ್ನು ಕೈಬಿಟ್ಟಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅಣೆಕಟ್ಟು ಕಟ್ಟುವ ಸಲುವಾಗಿ ಈ ವರ್ಷ ಎಷ್ಟು ಹಣವನ್ನು ಮಂಜೂರು ಮಾಡಿದ್ದೀರಿ? ಕಳೆದ ಒರ್ಷ ಎಷ್ಟು ಹಣವನ್ನು ಮಂಜೂರು ಮಾಡಿದ್ದೀರಿ?.

ಶ್ರಿ ಕಾಗೋಡು ತಿಮ್ಮಪ್ಪ (ಲೋಕೋಪಯೋಗಿ ಇಲಾಖೆಯ ಮಂತ್ರಿಗಳು).—ಕಳೆದ ವರ್ಷ ೧೦ ಲಕ್ಷ ಇಟ್ಟಿದ್ದರೂ ಕೂಡ ೪೩ ಲಕ್ಷದ ೩೫ ಸಾವಿರ ರೂಪಾಯಿಗಳಂ ಖರ್ಚಾಗಿದೆ. ಈ ವರ್ಷದ ವಿವರಗಳನ್ನು ಆ ಮೇಲೆ ಕೊಡುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ಇಲ್ಲಿ ಸಿಬ್ಬಂದಿಗೆ ಪ್ರತಿ ತಿಂಗಳು ೪ ಲಕ್ಷದ ೯೫ ಸಾವಿರದ 111 ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದ್ದಾರೆ. ಹಾಗಾದರೆ ವರ್ಷಕ್ಕೆ ಸುಮಾರು ೫೦ ರಿಂದ ೬೦ ಲಕ್ಷ ರೂಪಾಯಿ ಖರ್ಚಾದಂತಾಗ ತ್ತದೆ.

SRI KAGODU THIMMAPPA.—It is a statement in respect of the period from 1st April 1981 to December 1981.

SRI BHAVU RAO DESHPANDE —This a Statement shows the monthly expenditure of the establishment.

ವರ್ಷಕ್ಕೆ ೫೦,೬೦ ಲಕ್ಷ ರೂಪಾಯಿ ಖರ್ಚಾಗುತ್ತದೆ. ಇನ್ನು ಅಣೆಕಟ್ಟು ಕಟ್ಟಲಿಕ್ಕೆ ಎಲ್ಲಿ ಹಣ ಉಳಿಯುತ್ತದೆ?.

SRI KAGODU THIMMAPPA.—Yes. It is a monthly statement.

MR. DEPUTY SPEAKER.—The hon. member says that you are spending more amount on establishment. Furnish the figures afterwards.

SRI KAGODU THIMMAPPA.—I will furnish.

ಅಧ್ಯಕ್ಷರೇ, ಪ್ರಶ್ನೆಗೆ ಉತ್ತರವಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಅದಕ್ಕೆ ಪೂರಕವಾಗಿ, ಏಪ್ರಿಲ್, ಮೇ, ಜೂನ್, ಜುಲೈ, ಮತ್ತು ಆಗಸ್ಟ್ ನಲ್ಲಿ ಸರಾಸರಿ ತಿಂಗಳ ಖರ್ಚು ಆಗಿರುವ ಹಣ ೫೪,೭೦೦ ರೂಪಾಯಿಗಳು. ಆಗಸ್ಟ್ ೧೯೮೧ರವರೆಗೆ ಖರ್ಚಾಗಿರತಕ್ಕ ಹಣ ಸುಮಾರು ೩ ಕೋಟಿ ೭೦ ಲಕ್ಷ ರೂಪಾಯಿಗಳು ಫೌಂಡೇಷನ್ ಮತ್ತು ಕಾಂಕ್ರೀಟ್ ಕೆಲಸ ಕೂಡ ಆಗಿದೆ ; ಮಧ್ಯದಲ್ಲಿ ಡಿಸೈನ್‌ನ್ನು ಟೆಕ್ನಿಕಲ್ ಕಮಿಟಿಯವರು ಚೇಂಜ್ ಮಾಡಬೇಕು ಎಂದು ಹೇಳಿದ್ದಕ್ಕೋಸ್ಕರವಾಗಿ ಇದನ್ನು ಎಕ್ಸ್‌ಪಿನ್ ಮಾಡುತ್ತಿದ್ದೇವೆ.

ಶ್ರೀ ಬಾವೂರಾವ್ ದೇಶಪಾಂಡೆ.—ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಹಣ ಮಂಜೂರಾಗಿದೆ. ಡಿಸೈನ್ ಚೇಂಜ್ ಮಾಡಲಿಕ್ಕೆ ತೊಂದರೆಯೇನೂ ಇಲ್ಲ ಎರಡನೆಯದು ಸಂಬಂಧಪಟ್ಟ ಸಬ್‌ಡಿವಿಷನ್ ನಲ್ಲಿರತಕ್ಕವರನ್ನು ವರ್ಗ ಮಾಡಿ ಆಪ್ಪರ್ ಕೃಷ್ಣದ ಕಡೆ ತೆಗೆದುಹಾಕಿದ್ದಾರೆ. ಇದರಿಂದಾಗಿ ಅಲ್ಲಿಯ ಜನರೆಲ್ಲರಿಗೂ ಈ ಯೋಜನೆಯನ್ನು ಕೈಬಿಡುತ್ತಾರೆನ್ನುವ ಸಂಶಯ ಬಂದಿದೆ. ಇದರ ಬಗ್ಗೆ ತಾವೇನು ಹೇಳಬಯಸುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಇದಕ್ಕೆ ಮೂಲತಃ ಸೆಂಟ್ರಲ್ ವಾಟರ್ ಕಮಿಷನ್‌ನವರು ಅನುಮತಿಯನ್ನು ಕೊಟ್ಟಿಲ್ಲ. ಈ ಕಾರಣಕ್ಕಾಗಿ, ಇದು ಸ್ವಲ್ಪ ತಡವಾಗಿದೆ. ಮಧ್ಯದಲ್ಲಿ ಏನಾಗಿದೆ ಯೆಂದರೆ, ಡಿಸೈನ್ ಚೇಂಜ್ ಮಾಡಬೇಕು, ಎಂದು ಮಾಡಲ್ ಸ್ಟಡಿ ಮಾಡುತ್ತಿದ್ದಾರೆ. ಇದನ್ನು ಮಾಡುವುದಕ್ಕೆ ಹೆಚ್ಚಿನ ಸಮಯ ಬೇಕು. ಆದ್ದರಿಂದ ಅಲ್ಲಿಯವರೆಗೆ ಅನಾವಶ್ಯಕವಾಗಿ ಡಿವಿಜನ್‌ನ್ನು ಇಟ್ಟುಕೊಂಡರೆ ಖರ್ಚು ಹೆಚ್ಚಾಗುತ್ತದೆ ಎನ್ನುವ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ. ಇದು ೧೯೭೨-೭೩ರ ಸ್ಕೀಮ್‌ನಲ್ಲಿ ಪ್ರಾರಂಭವಾದ ಕೆಲಸ. ಮಾಡಲ್ ಸ್ಟಡಿ ಮಾಡಿ, ಟೆಕ್ನಿಕಲ್ ರಿಪೋರ್ಟ್ ಕೊಡುವವರೆಗೂ ಅನಾವಶ್ಯಕವಾಗಿ ಸಿಬ್ಬಂದಿ ಏಕೆ ಇರಬೇಕು ಎಂದು ಬೇರೆ ಕಡೆಗೆ ವರ್ಗ ಮಾಡಿದ್ದೇವೆ. ವರದಿ ಬಂದ ಮೇಲೆ ತೀವ್ರಗತಿಯಿಂದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಾವೂರಾವ್ ದೇಶಪಾಂಡೆ.—ಟೆಕ್ನಿಕಲ್ ಡಿಸೈನ್ ಬಗ್ಗೆ ನಿವೃತ್ತ ಮುಖ್ಯ ಇಂಜಿನಿಯರಾದ ಮಾನ್ಯ ಬಾಳೆಕುಂದರಗಿಯವರು ಏನು ಮಾಡಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಅವರ ಪ್ರಕಾರ ಇದನ್ನು ೨-೩ ತಿಂಗಳಲ್ಲಿ ಬದಲಾವಣೆ ಮಾಡಬಹುದು. ಆದರೂ ಸಹ ತಾವು ಈ ವರ್ಷ ಸಾಕಷ್ಟು ಹಣವನ್ನು ಇದಕ್ಕೆ ಒದಗಿಸಿಲ್ಲ. ಈ ಅಣೆಕಟ್ಟಿನಿಂದ ಅಲ್ಲಿರತಕ್ಕ ಉನ್ನತ ವ್ಯಕ್ತಿಗಳ ಜಮೀನುಗಳು ಮುಳುಗದೆಯಾಗುವುದರಿಂದ ಅದನ್ನು ತಪ್ಪಿಸಲು ತಂತ್ರ ನಡೆಯುತ್ತಿದೆ ಎನ್ನುವ ಸಂಶಯ ಇದೆ, ಅದನ್ನು ನಿವಾರಣೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಏನೂ ಆಗಿಲ್ಲ ; ಆದ್ದರಿಂದ ಅವರು ಸಂಶಯ ಪಡಬೇಕಾದ್ದು ಏನೂ ಇಲ್ಲ. ಆ ತರಹ ಏನಾದರೂ ಇದ್ದರೆ ಅದನ್ನು ವಿಚಾರ ಮಾಡೋಣ. ಆಪ್ಪರ್ ಕೃಷ್ಣ ಕಂಪ್ಲೀಟ್ ಯೋಜನೆಯು ಅಲ್ಲಿ ಬೇಕಾಗುತ್ತದೆಯೇ ಎನ್ನುವುದನ್ನು ನಾವು ನೋಡಬೇಕು ಇದರ ಬಗ್ಗೆ ನಾವು ಇನ್ನೂ ಫೈನಲ್ ಆಗಿ ತೀರ್ಮಾನ ಮಾಡಬೇಕು. ಈಗ ವಾಟರ್ ಲೆವೆಲ್ ಅಲ್ಲಿ ಬಂದ ಮೇಲೆ ಅದಕ್ಕನುಗುಣವಾಗಿ ಡಿಸೈನ್ ಮಾಡಬೇಕಾಗುತ್ತದೆ ಅದಕ್ಕೋಸ್ಕರ ಇದು ತಡವಾಗಿದೆ. ಕಳೆದ ವರ್ಷ ನಾವು ಇದಕ್ಕಾಗಿ ೧೦ ಲಕ್ಷ ರೂಪಾಯಿಗಳ ಅವಕಾಶ ಮಾಡಿಕೊಂಡಿದ್ದು ೪೩ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಈ ವಿಷಯದ ಬಗ್ಗೆ ನಾವು ಹಣದ ಕೊರತೆಯನ್ನೇನೂ ತೋರಿಸಿಲ್ಲ ; ಟೆಕ್ನಿಕಲ್ ರಿಪೋರ್ಟ್ ಬರಬೇಕು, ಮಾನ್ಯ ಸದಸ್ಯರು ಹೇಳುವಂಥ ಸಂಶಯ ಏನೂ ಇಲ್ಲ. That apprehension has no basis.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರಲ್ಲಿ ತಾವು ಮೊದಲು ಹಣ ಖರ್ಚು ಮಾಡಿ ಕಟ್ಟಿದ್ದೆಲ್ಲಾ ವಾಷ್-ಔಟ್ ಆಗಿ ಹೋಗಿದೆ, ಸುಮಾರು ೭೦ ಲಕ್ಷ ರೂಪಾಯಿಗಳ ಕೆಲಸವೆಲ್ಲಾ ಈ ತರಹವಾಗಿದೆ.

ಅಲ್ಲಿ ಫೌಂಡೇಷನ್ ಹಾಕಿ, ಕಾನ್‌ಕ್ರೀಟ್ ಸಹ ಹಾಕಿದ್ದರು. ಅದಕ್ಕೆ ಸಿಮೆಂಟ್ ಸರಿಯಾಗಿ ಹಾಕದೇ ಇದ್ದುದ್ದರಿಂದ, ಹಣ ಸರಿಯಾದ ರೀತಿಯಲ್ಲಿ ಖರ್ಚು ಮಾಡಿ ಆ ಕೆಲಸವನ್ನು ಮಾಡದೇ ಇದ್ದರಿಂದ ಅದೆಲ್ಲಾ ಕೊಚ್ಚಿಕೊಂಡು ಹೋಯಿತು. ಈಗ ನದಿ ತನ್ನ ಪ್ರವಾಹದ ದಾರಿಯನ್ನೇ ಬದಲು ಮಾಡಿದೆ. ಈ ಬಗ್ಗೆ ಏನಾದರೂ ತನಿಖೆ ಮಾಡಿ ಇದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಗೊತ್ತು ಮಾಡಿದ್ದೀರಾ? ಈ ತನಿಖೆ ಮಾಡಿಲ್ಲದಿದ್ದರೆ ಈಗಲಾದರೂ ತನಿಖೆ ಮಾಡಿ ಸಂಬಂಧಪಟ್ಟ ಇಂಜಿನಿಯರ್ ಮತ್ತು ಮುಖ್ಯಾಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ವಿವರ ಸಧ್ಯಕ್ಕೆ ನನ್ನ ಹತ್ತಿರವಿಲ್ಲ. ಅದನ್ನು ತರಿಸಿ ನೋಡಿ ಅದಂ ಯಾವ ಹಂತದಲ್ಲಿದೆ ಎಂಬುದನ್ನು ನಾನಂ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರು ಅಲ್ಲಿ ಫೌಂಡೇಷನ್ ಆಗಿದೆ, ಕಾನ್‌ಕ್ರೀಟ್ ಆಗಿದೆ ಎಂದಂ ಹೇಳಿದ್ದಾರೆ. ಹಿಂದೆ ಹಾಕಿರತಕ್ಕಂಥ ಸಿಮೆಂಟ್, ಗಾರೆಯೆಲ್ಲಾ ವಾಷ್‌ಔಟ್ ಆಗಿದೆ ಎಂದಂ ಹೇಳಿದ್ದಾರೆ. ಹಿಂದೆ ಸಂಬಂಧಪಟ್ಟವರು ಅದನ್ನು ಯಾವರೀತಿಯಲ್ಲಿ ಕಟ್ಟಿದ್ದರೋ ಗೋತ್ತಿಲ್ಲ. ಈ ಬಗ್ಗೆ ನಾನು ಫೈಲ್ ತರಿಸಿ ನೋಡಿ. ಆ ರೀತಿ ಏನಾದರೂ ತಪ್ಪಾಗಿದ್ದರೆ ಸಂಬಂಧಪಟ್ಟವರ ಮೇಲೆ ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

Au iting of Housfng Co—operative Society Mandya

811 SRI M. S. ATMANANDA (Mandya).—Will the Minister for Co-operation be pleased to state.—

(a) whether the accounts of Housing Co-operative Society of Mandya Town has been audited ;

(b) whether it has come to the notice of the Government that the amount has been misappropriated in the said Societ y;

(c) if so. the names of persons who are responsible for this?

SRI H. C. SRIKANTAIAH (Minister for Co-operation).—

(a) Yes,

(b) Yes.

(c) Sri H. N. Vaidyanath, Ex-Secretary and Sri K. G. Nagarajaiah, Ex-Hon. Treasurer of this Society were responsible for this.

ಶ್ರೀ ಎಂ. ಎಸ್. ಆತ್ಮಾನಂದ.—ಮಂಡ್ಯ ನಗರದ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಎಷ್ಟು ಹಣ ದುರುಪಯೋಗವಾಗಿದೆ ? ಆಗ ಆಡಳಿತ ಮಂಡಳಿ ಇರಲಿಲ್ಲವೆ ? ಮಾಜಿ ಕಾರ್ಯದರ್ಶಿಯಾದ ವೈದ್ಯನಾಥ ಮತ್ತು ಮಾಜಿ ಖಜಾಂಚಿಯಾದ ನಾಗರಾಜಯ್ಯ ಅವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—೧೯೭೫-೭೬ರಲ್ಲಿ ರೂ.೨೫೦-೨೨ ಪೈಸೆ ೧೯೭೬-೭೭ ರಲ್ಲಿ ೨,೦೦,೭೦೬-೫೩ ಪೈಸೆ, ೧೯೭೭-೭೮ ರಲ್ಲಿ ೯೪,೪೫೬-೨೫ ಪೈಸೆ ಹಣ ದುರುಪಯೋಗವಾಗಿದೆ. ಒಟ್ಟು ೩,೭೬,೪೦೫-೫೩ ಪೈಸೆ ದುರುಪಯೋಗವಾಗಿದೆ. ಮಾಜಿ ಕಾರ್ಯದರ್ಶಿಯಾದ ಹೆಚ್. ಎನ್. ವೈದ್ಯನಾಥ ಮತ್ತು ಮಾಜಿ ಖಜಾಂಚಿಯಾದ ಕೆ. ಜಿ, ನಾಗರಾಜಯ್ಯ ಇವರೇ ಜವಾಬ್ದಾರರು ಎಂದು ಈಗಾಗಲೇ ತೀರ್ಮಾನವಾಗಿದೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಕೋರ್ಟ್‌ನಲ್ಲಿ ಅಪೀಲು ಹಾಕಿಕೊಂಡಿದ್ದಾರೆ. ಕೇಸ್ ಡಿಸ್‌ಪೋಸಲ್ ಆದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗಂ